## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ನಾಗಮಂಗಲ.

ಸಿ.ಸಿ- 826/2022

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ಅಯೂಬ್ ಉಲ್ಲಾ ಖಾನ್ | ಡಿ.ಡಬ್ಲ್ಯೂ | : | 1 |
| ತಂದೆ / ಗಂಡನ ಹೆಸರು | : | ನೂರುಲ್ಲಾ ಖಾನ್ | ದಿನಾಂಕ | : | 30-10-2025 |
| ವಯಸ್ಸು | : | 38 ವರ್ಷ | | | |
| ಉದ್ಯೋಗ | : | ಕೂಲಿ ಕೆಲಸ | | | |
| ವಾಸಸ್ಥಳ | : | ನಾಗಮಂಗಲ | | | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. ಸಿ. ಕೆ. ಆರ್. ವಕೀಲರಿಂದಃ

1. ಫಿರ್ಯಾದುದಾರರಾದ ಎನ್. ಸಂದೀಪ ರವರು ನನಗೆ ಪರಿಚಯ ಇರುವುದಿಲ್ಲ. ನಾನು ಫಿರ್ಯಾದುದಾರರಿಂದ ಯಾವುದೇ ಸಾಲವನ್ನು ಪಡೆದಿರುವುದಿಲ್ಲ. ನಾನು ಸತೀಶ್ ಎಂಬುವವರಿಂದ 2016 ನೇ ಇಸವಿಯಲ್ಲಿ ಎರಡು ಲಕ್ಷ ರೂಪಾಯಿಗಳ ಸಾಲ ಪಡೆದಿದ್ದು ಅದನ್ನು 2018 ನೇ ಇಸವಿಯಲ್ಲಿ ಮರು ಪಾವತಿ ಮಾಡಿದ್ದೇನು. ಸದರಿ ಸಾಲದ ಭದ್ರತೆಗಾಗಿ ನಾನು ಸದರಿ ಸತೀಶ್ ರವರಿಗೆ 2 ಚೆಕ್ಕುಗಳನ್ನು ನೀಡಿದ್ದು ಸಾಲ ಮರುಪಾವತಿ ಮಾಡಿದ ನಂತರ ಸದರಿ ಚೆಕ್ಕುಗಳನ್ನು ವಾಪಸ್ಸು ಕೊಡುವಂತೆ ಸತೀಶ್ ರವರ ಬಳಿ ಕೇಳಿದ್ದೇನು. ಸದರಿ ಸತೀಶ್ ರವರು ಚೆಕ್ಕುಗಳನ್ನು ನೀಡುವುದಾಗಿ ನನಗೆ ಹೇಳಿದ್ದು ಆ ನಂತರ ಅವುಗಳನ್ನು ನನಗೆ ವಾಪಸ್ಸು ನೀಡಿರುವುದಿಲ್ಲ. ಸಂದೀಪ ರವರು ಸದರಿ ಸತೀಶ್ ರವರ ಭಾಮೈದನಾಗಿದ್ದು ನಂತರ ಸದರಿ ಸತೀಶ್ ರವರು ಸದರಿ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಸಂದೀಪ ರವರ ಮೂಲಕ ಈ ಪ್ರಕರಣವನ್ನು ದಾಖಲು ಮಾಡಿಸಿರುತ್ತಾರೆ. ಸಂದೀಪ ರವರು ಯಾರು ಎಂಬುದು ನನಗೆ ಗೊತ್ತಿಲ್ಲ. ಅವರಿಂದ ನಾನು ಯಾವುದೇ ಹಣ ಪಡೆದಿಲ್ಲ. ಆ ಕಾರಣಕ್ಕೆ ನಾನು ಸಂದೀಪ ರವರಿಗೆ ಯಾವುದೇ ಹಣ ನೀಡಲು ಭಾದ್ಯಸ್ಥನು ಇರುವುದಿಲ್ಲ. ಕಾರಣ ಈ ಪ್ರಕರಣವನ್ನು ವಜಾ ಮಾಡಿ ನನ್ನನ್ನು ಖುಲಾಸೆಗೊಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

**(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು)**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಗಿದೆ )

ಓ. ಹೇ, ಕೇ, ಸರಿ ಇದೆ,

ಪ್ರಧಾನ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ